MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - FRIDAY 26-5-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

### ಪೂರೈಕೆಯ ಅನಿಶ್ಚಿತತೆ, ಮುಂದಿನ ಬೆಳೆಗೆ ಹವಾಮಾನ ವ್ಯತ್ಯಯದ ಶಂಕೆ ತೊಗರಿ, ಉದ್ದು ದರ ಹೆಚ್ಚಳ

ಪೂರೈಕೆಯಲ್ಲಿ ಇಳಿಕೆಯಿಂದ ಕಡಿಮೆಯಾದ ಲಭ್ಯತೆ ಹಾಗೂ ಮುಂದಿನ ಬೆಳೆಗೆ ಹವಾಮಾನದ ಅನಿಶ್ಚಿತತೆಯ ಶಂಕೆಗಳಾದ ಮುಂದಿನ ದಿನಗಳಲ್ಲಿ ಬೇಳೆಕಾಳು ದರ, ಮುಖ್ಯವಾಗಿ ತೊಗರಿ, ತೊಗರಿಬೇಳೆ ಹಾಗೂ ಉದ್ದು, ಉದ್ದಿನಬೇಳೆಗಳ ದರಗಳು ಇನ್ನೂ ಹೆಚ್ಚಳವಾಗುವ ಸಾಧ್ಯತೆಯಿದೆಯೆಂದು ಕೈಗಾರಿಕೆ ಹಾಗೂ ವ್ಯಾಪಾರಿ ವಲಯಗಳ ಚಿಂತನೆಯಾಗಿದೆಯೆನ್ನಲಾಗಿದೆ. ಹಿಂದಿನ ಬೆಳೆಯ ಉತ್ಪಾದನೆ ಇಳಿಕೆಯಾದುದರಿಂದ ಇವುಗಳ ಲಭ್ಯತೆ ಕಡಿಮೆಯೆನ್ನಲಾಗಿದೆ. ಮೌಲ್ಯದಲ್ಲಿ ಬೇಳೆಕಾಳು ಆಮದು ಹಿಂದಿನ ವರ್ಷಕ್ಕಿಂತ 64 ಶೇಕಡಾ ಹೆಚ್ಚಳವಾಗಿದೆಯೆನ್ನಲಾಗಿದೆ. ಮುಂದಿನ ತಿಂಗಳಲ್ಲಿ ದರ ಇನ್ನೂ ಹೆಚ್ಚಳವಾಗಿದೆಯೆನ್ನಲಾಗಿದೆ. ಮುಂದಿನ ತಿಂಗಳಲ್ಲಿ ದರ ಇನ್ನೂ ಹೆಚ್ಚಳವಾಗುವ ಸಾಧ್ಯತೆಯಿದೆಯೆನ್ನಲಾಗಿದೆ. ದರ ಹೆಚ್ಚಳವಿರುವುದರಿಂದ ಮುಂದಿನ ಬೆಳೆಯ ಬಿತ್ತನೆ ಪ್ರದೇಶ ಹೆಚ್ಚಳವಾಗುವ ಸಾಧ್ಯತೆಯಿದೆಯೆನ್ನಲಾಗಿದೆ.

### ಎಪ್ರಿಲ್ ತಿಂಗಳಲ್ಲಿ ತೈಲ ಹಿಂಡಿ ರಫ್ತು ಗಣನೀಯ ಹೆಚ್ಚಳ

2023 ಎಪ್ರಿಲ್‌ನಲ್ಲಿ ಭಾರತದಿಂದ 4.93 ಲಕ್ಷ ಟನ್ ತೈಲ ಹಿಂಡಿಗಳು ರಫ್ತಾಗಿದ್ದು, ಹಿಂದಿನ ವರ್ಷದ ಇದೇ ತಿಂಗಳಲ್ಲಿ 3.32 ಲಕ್ಷ ಟನ್ ರಫ್ತಾಗಿತ್ತೆನ್ನಲಾಗಿದೆ. 48.47 ಶೇಕಡಾ ಪ್ರಗತಿ ಕಂಡಿದೆಯೆನ್ನಲಾಗಿದೆ. ಸೋಯಾಬೀನ್ ದರ ಗಣನೀಯ ಇಳಿಕೆಯಿಂದಾಗಿ, ಭಾರತದ ಸೋಯಾಮೀಲ್ ದರವೂ ಇಳಿಕೆಯಾಗಿದ್ದು, ಜಾಗತಿಕ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕವಿರುವುದರಿಂದ ಅದರ ರಫ್ತು 1.77 ಲಕ್ಷ ಟನ್‌ಗಳಿಗೆ ಏರಿಕೆಯಾಗಿದೆಯೆನ್ನಲಾಗಿದೆ. ಹಿಂದಿನ ವರ್ಷ ಇದೇ ತಿಂಗಳಲ್ಲಿ 24937 ಟನ್ ರಫ್ತಾಗಿತ್ತೆನ್ನಲಾಗಿದೆ.

### ಭಾರತದ ಮೇ ತಿಂಗಳ ಪಾಮೆಣ್ಣೆ ಆಮದು 27 ತಿಂಗಳ ಕನಿಷ್ಠ ಮಟ್ಟಕ್ಕೆ

ಪಾಮೆಣ್ಣೆಯ ಬದಲಾಗಿ ಪರ್ಯಾಯ ಖಾದ್ಯತೈಲ ಗಳಾದ ಸೋಯಾ ಎಣ್ಣೆ ಹಾಗೂ ಸೂರ್ಯಕಾಂತಿ ಎಣ್ಣೆ ಆಮದು ಹೆಚ್ಚಳವಾಗುತ್ತಿದ್ದು, ಭಾರತದ ಮೇ ತಿಂಗಳ ಪಾಮೆಣ್ಣೆ ಆಮದು ಹಿಂದಿನ 27 ತಿಂಗಳ ಕನಿಷ್ಠ ಮಟ್ಟ ತಲುಪಬಹುದೆಂದು ಅಂದಾಜಿಸಲಾಗುತ್ತಿದೆ. ಪಾಮೆಣ್ಣೆ ಆಮದು ಮೇ ತಿಂಗಳಲ್ಲಿ 7 ಲಕ್ಷ ಟನ್‌ಗಳಿಯಬಹುದೆನ್ನಲಾಗಿದೆ.

### 2024 ರಲ್ಲಿ ಮಲೇಶೀಯಾದ ಪಾಮೆಣ್ಣೆ ಉತ್ಪಾದನೆ 1-3 ಮಿಲಿಯನ್ ಟನ್ ಇಳಿಕೆ– MPOB

ಎಲ್ ನಿನೋ ಹವಾಮಾನದ ಪರಿಣಾಮವಾಗಿ 2023-24 ರಲ್ಲಿ ಮಲೇಶಿಯಾದ ಪಾಮೆಣ್ಣೆ ಉತ್ಪಾದನೆ 1-3 ಮಿಲಿಯನ್ ಟನ್ ಇಳಿಕೆಯಾಗುವ ಸಾಧ್ಯತೆಯಿದೆಯೆಂದು ಮಲೇಶಿಯಾದ ಪಾಮೆಣ್ಣೆ ಬೋರ್ಡ್ ಹೇಳಿದೆ.

### ಮಲೇಶಿಯನ್ ಪಾಮೆಣ್ಣೆ ದರ ಹೆಚ್ಚಳ

ಸತತ ಇಳಿಕೆಯಾಗಿದ್ದ ಮಲೇಶಿಯನ್ ಪಾಮೆಣ್ಣೆ ದರ 3 ಶೇಕಡಾ ಹೆಚ್ಚಳವಾಗಿ ಟನ್‌ಗೆ 3518 ರಿಂಗಿಟ್ಸ್ ($ 793.24) ಆಗಿದೆ. ಎಲ್ ನಿನೋ ಹವಾಮಾನದಿಂದ ಉತ್ಪಾದನೆ ಇಳಿಕೆಯ ಕಳವಳ, ದುರ್ಬಲ ರಿಂಗಿಟ್ಸ್‌ನಿಂದ ದರ ಹೆಚ್ಚಳವಾಗಿದೆಯೆನ್ನಲಾಗಿದ್ದು ವಾರದ ಗಳಿಕೆಯತ್ತ ಸಾಗಿದೆ. ಮಲೇಶಿಯನ್ ಪಾಮೆಣ್ಣೆ ರಫ್ತು 1-25 ಮೇ ಅವಧಿಯಲ್ಲಿ 0.7 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ.

### ದಾವಣಗೆರೆಯಲ್ಲಿ ಜೋಳ ದರ ಹೆಚ್ಚಳ

ಆವಕ ಇಳಿಕೆಯಿಂದ ದಾವಣಗೆರೆಯಲ್ಲಿ ಜೋಳ ದರ ರೂ.150 ಹೆಚ್ಚಳವಾಗಿದೆಯೆನ್ನಲಾಗಿದೆ, ಬಿಹಾರದ ಪೂರ್ನಿಯಾ ಮಾರುಕಟ್ಟೆಯಲ್ಲಿ ದರ ಸ್ಥಿರವಿದೆಯೆನ್ನಲಾಗಿದೆ. 20ರೋಲ್ ಹಾಗೂ ಕೋಟಾಗಳಲ್ಲಿ ಗೋಧಿ ದರ ಸ್ಥಿರವಿದೆಯೆನ್ನಲಾಗಿದೆ. ಒಟ್ಟು ಜೋಳ ಉತ್ಪಾದನೆ 35.91 ಮಿಲಿಯನ್ ಟನ್‌ಗಳಾಗಬಹುದೆನ್ನಲಾಗಿದೆ.

### 2022-23 ರಲ್ಲಿ ಅಕ್ಕಿ ಉತ್ಪಾದನೆ 135.5 ಮಿಲಿಯನ್ ಟನ್‌ಗಳಿಗೆ ಹೆಚ್ಚಳ ಸಾಧ್ಯತೆ

2022-23 ರಲ್ಲಿ ಅಕ್ಕಿ ಉತ್ಪಾದನೆ ಈ ಹಿಂದಿನ ಅಂದಾಜಿನ 129.4 ಮಿಲಿಯನ್ ಟನ್‌ಗಳಿಂದ 135.5 ಮಿಲಿಯನ್ ಟನ್‌ಗಳಿಗೆ ಹೆಚ್ಚಳ ಸಾಧ್ಯತೆ ಇದೆಯೆನ್ನಲಾಗಿದೆ. ಗೋಧಿ ಉತ್ಪಾದನೆ 107.7 ಮಿಲಿಯನ್ ಟನ್‌ಗಳಿಂದ 112.7 ಮಿಲಿಯನ್ ಟನ್‌ಗಳಿಗೇರಲಿದೆಯೆನ್ನಲಾಗಿದೆ. ಒಟ್ಟು ಆಹಾರ ಧಾನ್ಯಗಳ ಉತ್ಪಾದನೆ 330 ಮಿಲಿಯನ್ ಟನ್‌ಗಳಾಗಬಹುದೆನ್ನಲಾಗಿದೆ.

### ಬ್ರೆಜಿಲ್ ರಿಯಲ್ ದುರ್ಬಲ, ವಿಯೆಟ್ನಾಂ ಉತ್ಪಾದನೆ ಹೆಚ್ಚಳ ನಿರೀಕ್ಷೆಯಿಂದ ಜಾಗತಿಕ ಕಾಫಿ ದರ ಇಳಿಕೆ

ಬ್ರೆಜಿಲ್‌ನ ರಿಯಲ್ ದರ ಡಾಲರ್‌ಗಿಂತ 2 ವಾರಗಳಿಂದ ಕನಿಷ್ಠ ಮಟ್ಟಕ್ಕಿಳಿದುದರಿಂದ ಅರೆಬಿಕಾ ಕಾಫಿ ದರ -5.30(2.80%) ಇಳಿಕೆ ಹಾಗೂ USDA 2023-24 ರಲ್ಲಿ ವಿಯೆಟ್ನಾಂ ಕಾಫಿ ಉತ್ಪಾದನೆ 5 ಶೇಕಡಾ ಹೆಚ್ಚಳವಾಗಬಹುದಾದ ವರದಿಗಳಿಂದ ರಾಬೆಸ್ಟಾ ಕಾಫಿ ಇನ್ವೆಂಟರಿ ಜಾಗತಿಕ ದಾಸ್ತಾನು ಐದೂವರೆ ತಿಂಗಳ ಗರಿಷ್ಠ ಮಟ್ಟದಲ್ಲಿದೆಯೆನ್ನಲಾಗಿದೆ. ಅರೆಬಿಕಾ ಕಾಫಿ ಜಾಗತಿಕ ದಾಸ್ತಾನು ಐದೂವರೆ ತಿಂಗಳ ಕನಿಷ್ಠ ಮಟ್ಟಕ್ಕಿಳಿದಿದೆಯೆನ್ನಲಾಗಿದೆ. ಜಾಗತಿಕ ಕಾಫಿ ಪೂರೈಕೆ ಇಳಿಕೆ ಯಿದೆಯೆನ್ನಲಾಗಿದೆ.